

# ಅನಿಯಮಿತ ಹೃದಯ ಬಡಿತ ಅಲಕ್ಷ್ಯ ಬೇಡ..

ಹೃದಯ ಬಡಿತ ಸಮಸ್ಯೆ (ಹಾರ್ಟ್ ರಿದಮ್ ಡಿಸಾರ್ಡರ್) ವಯಸ್ಸಾದವರಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಹೃದಯ ಬಡಿತ ಅತ್ಯಂತ ನಿಧಾನ ಅಥವಾ ಅತ್ಯಂತ ವೇಗವಾಗಿ ಆಗುವುದರಿಂದ ವಿಪರೀತ ಆಯಾಸವಾಗಿ ಕೆಲವೊಮ್ಮೆ ಪ್ರಜ್ಞೆ ತಪ್ಪುವ ಸಾಧ್ಯತೆಯೂ ಇದೆ. ಈ ರೀತಿಯ ಅನಿಯಮಿತ ಹೃದಯ ಬಡಿತಕ್ಕೆ ಕ್ಲಪ್ತ ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡಿದರೆ ಅಪಾಯದಿಂದ ಪಾರಾಗಬಹುದು.

■ ಉಮಾ ವೇಣೂರು

ಹೃದಯ ಸ್ತಂಭನ, ಹೃದಯ ವೈಫಲ್ಯ, ಹೃದಯಾಘಾತ, ಹೃದಯ ಬಡಿತದಲ್ಲಿ ಏರುಪೇರು, ಕ್ಷೀಣಿಸಿದ ಹೃದಯ, ಹೆಚ್ಚಾದ ಎದೆನೋವು.. ಇವೆಲ್ಲಾ ಹೃದ್ರೋಗದ ವಿವಿಧ ಆಯಾಮಗಳು. ಇಷ್ಟು ಬೇನೆಗಳಲ್ಲಿ ಯಾವುದೇ ಒಂದು ಬಂದರೂ ತಕ್ಷಣ ತಜ್ಞ ವೈದ್ಯರ ತಪಾಸಣೆ ಆಗಲೇ ಬೇಕು. ಅನಿಯಮಿತ ಹೃದಯ ಬಡಿತ ಅಥವಾ ಹೃದಯ ಬಡಿತದಲ್ಲಿ ಏರುಪೇರು ಮೇಲ್ನೋಟಕ್ಕೆ ಗೊತ್ತಾಗದೇ ಇದ್ದರೂ ಹೃದಯದಲ್ಲಿ ತಳಮಳ ಉಂಟಾದ ಕೂಡಲೇ ವೈದ್ಯರ ಭೇಟಿ ಅನಿವಾರ್ಯ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಅನಿಯಮಿತ ಹೃದಯ ಬಡಿತ ಸಮಸ್ಯೆ ಹೆಚ್ಚುತ್ತಿದೆ. ಅದೂ 65 ವರ್ಷ ದಾಟಿದವರಲ್ಲಿ ಈ ಸಮಸ್ಯೆ ಹೆಚ್ಚು.

ಹೃದಯ ಬಡಿತದಲ್ಲಿ ಏರುಪೇರು ಎಂದರೆ ಹೃದಯದ ಬಡಿತ ನಿಧಾನವಾಗುವುದು ಅಥವಾ ಏಕಾಏಕಿ ಜಾಸ್ತಿಯಾಗುವುದು ಇತ್ತೀಚಿನ ಜೀವನ ಶೈಲಿ ಕಾಯಿಲೆಗಳಿಂದ ಹೆಚ್ಚಾಗಿದೆ. ಆಹಾರದಲ್ಲಿ ಅಪಥ್ಯ, ಮಧುಮೇಹ, ಏರು ರಕ್ತದೊತ್ತಡ, ಆನುವಂಶೀಯ ಕಾಯಿಲೆಗಳು, ಉಸಿರಾಟದ ತೊಂದರೆ ಇವೆಲ್ಲವೂ ಹೃದಯ ಬಡಿತ (ಹಾರ್ಟ್ ರಿದಮ್) ಏರುಪೇರಾಗಲು ಪ್ರಮುಖ ಕಾರಣವಾಗುತ್ತವೆ.

## ಹೃದಯ ಬಡಿತ ಸಮಸ್ಯೆ (ಹಾರ್ಟ್ ರಿದಮ್ ಡಿಸಾರ್ಡರ್)

ಹೃದಯ ಬಡಿತ ಅತ್ಯಂತ ನಿಧಾನ ಅಥವಾ ಅತ್ಯಂತ ವೇಗವಾಗಿ ಆಗುವುದರಿಂದ ವಿಪರೀತ ಆಯಾಸವಾಗಿ ಕೆಲವೊಮ್ಮೆ ಪ್ರಜ್ಞೆ ತಪ್ಪುವ ಸಾಧ್ಯತೆಯೂ ಇದೆ. ಈ ರೀತಿಯ ಅನಿಯಮಿತ ಹೃದಯ ಬಡಿತಕ್ಕೆ ತಕ್ಷಣಕ್ಕೆ ಉತ್ತಮ ಚಿಕಿತ್ಸೆ ನೀಡಿದರೆ ಅಪಾಯದಿಂದ ಪಾರಾಗಬಹುದು. ಅಲ್ಲದೆ ಇಂದು ಹೃದಯ ಬಡಿತ ಸಮಸ್ಯೆ ಸಾಮಾನ್ಯವಾಗಿ ಬಿಟ್ಟಿದೆ. ಇದನ್ನು ಸಾಮಾನ್ಯ ವೈದ್ಯರು ತಪ್ಪಾಗಿ ಗ್ರಹಿಸಿ ಹೃದಯ ಬೇನೆಗೆ ಚಿಕಿತ್ಸೆ ನೀಡುವುದೂ ಇದೆ. ಹೀಗಾಗಿ ತಜ್ಞ ವೈದ್ಯರ ಬಳಿ ಚಿಕಿತ್ಸೆ ಪಡೆಯುವುದು ಒಳ್ಳೆಯದು. ಇದಕ್ಕೆ ಹೃದ್ರೋಗ ತಜ್ಞರು ಅದರಲ್ಲೂ ಎಲೆಕ್ಟ್ರೋ ಫಿಸಿಯಾಲಜಿಸ್ಟ್ ಸೂಕ್ತ ಚಿಕಿತ್ಸೆ ನೀಡುತ್ತಾರೆ.

'ಹಾರ್ಟ್ ರಿದಮ್ ಸಮಸ್ಯೆ ಇದ್ದವರಲ್ಲಿ ರಕ್ತವನ್ನು ಹೃದಯದಿಂದ ಇತರ ಅಂಗಗಳಿಗೆ ಸರಬರಾಜು ಮಾಡುವಲ್ಲಿ ವಿಫಲವಾಗುತ್ತದೆ. ದೇಹದ ಇತರ ಭಾಗಗಳ ಸಮಗ್ರ ಕಾರ್ಯನಿರ್ವಹಣೆಗೆ ಅಗತ್ಯವಿರುವಷ್ಟು ರಕ್ತವನ್ನು ಪಂಪ್ ಮಾಡುವಲ್ಲಿ ಹೃದಯ ವಿಫಲವಾದಾಗ ಅನೇಕ ಸಮಸ್ಯೆಗಳು ಉಂಟಾಗುತ್ತವೆ. ಹೃದಯದಲ್ಲಿನ ಮಾಂಸಖಂಡಗಳು ಸರಿಯಾಗಿ ಕೆಲಸ ಮಾಡದೇ ಇದ್ದಾಗಲೂ ಹೃದಯದಲ್ಲಿ ಅನಿಯಮಿತ ಬಡಿತ ಉಂಟಾಗುತ್ತದೆ. ವಯಸ್ಸಾದವರಲ್ಲಿ ಏರು ರಕ್ತದೊತ್ತಡ, ಹೃದಯದ ಮಾಂಸಖಂಡಗಳಲ್ಲಿ ಸೋಂಕು ಉಂಟಾಗುವುದು, ಆನುವಂಶೀಯ ತೊಂದರೆಗಳು.. ಇದ್ದರೆ ಹೃದಯ ಬಡಿತ ಅನಿಯಮಿತವಾಗುತ್ತದೆ. ವಾರ, ತಿಂಗಳು ಕಳೆದಂತೆ ಈ ಸಮಸ್ಯೆ ಹೆಚ್ಚುತ್ತಲೇ ಹೋಗಿ ರೋಗಿಯ ಜೀವಕ್ಕೇ ಅಪಾಯವಾಗುವ ಸಾಧ್ಯತೆ ಇದೆ' ಎಂದು ಹೇಳುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಹೃದ್ರೋಗ ಮತ್ತು ಹಾರ್ಟ್ ರಿದಮ್ ತಜ್ಞೆ ಡಾ. ಯಶೋದಾ ರವಿ.

ಹೃದಯ ಬಡಿತ ಏರುಪೇರು ಆದರೆ ಮುಂದೆ ಅದು ಹೃದಯ ವೈಫಲ್ಯ (ಹಾರ್ಟ್ ಫೇಲ್ಯೂರ್) ಕ್ಕೆ ಕಾರಣವಾಗಬಹುದು. ಹೃದಯಾಘಾತ, ಹತೋಟಿ ಇರದ ರಕ್ತದೊತ್ತಡ ಮತ್ತು ಇದಕ್ಕೆ ಪದೇ ಪದೇ ಸೇವಿಸುವ ಔಷಧಿಗಳು, ಮಧುಮೇಹ, ಹೃದಯ ಸ್ನಾಯುಗಳಿಗೆ ಸೋಂಕು ಮುಂತಾದವು ಹೃದಯ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದು ಎಚ್ಚರಿಸುತ್ತಾರೆ ಅವರು.

ಸಾಮಾನ್ಯವಾಗಿ 65 ವರ್ಷ ದಾಟಿದವರಲ್ಲಿ ಅನಿಯಮಿತ ಹೃದಯ ಬಡಿತ ಹೆಚ್ಚು. ಒಂದು ಅಂದಾಜಿನ ಪ್ರಕಾರ ವಿಶ್ವದಾದ್ಯಂತ 22 ದಶಲಕ್ಷ ಮಂದಿ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ಶೇ.10ರಿಂದ 20ರಷ್ಟು ಮಂದಿಗೆ ಈ ಸಮಸ್ಯೆ ಇದೆ. ಹೃದಯ ಬಡಿತ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎಂಬುದು ಆತಂಕಕಾರಿ. ಹೃದಯ ಬಡಿತ ಸಮಸ್ಯೆ ಇರುವ ರೋಗಿಗಳು ಪದೇ ಪದೇ ಆಸ್ಪತ್ರೆಗೆ ದಾಖಲಾಗಬೇಕಾದ ಅನಿವಾರ್ಯವೂ ಇದೆ. ಹಾರ್ಟ್ ರಿದಮ್ ಸಮಸ್ಯೆ ಪಶ್ಚಿಮ ರಾಷ್ಟ್ರಗಳಲ್ಲಿ ಹೆಚ್ಚು ಇದ್ದು, ಅಲ್ಲಿನ ಜನರಿಗೆ ಈ ಬಗ್ಗೆ ತಿಳಿವಳಿಕೆಯೂ ಇದೆ. ಭಾರತದಲ್ಲಿ ಹೃದಯ ಬಡಿತ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಸೂಕ್ತ ತಿಳಿವಳಿಕೆ ಅಗತ್ಯ.

'ಕರ್ನಾಟಕದಲ್ಲಿ ಹೃದ್ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ವ್ಯಾಯಾಮದ ಕೊರತೆ, ಬೊಜ್ಜು, ಬದಲಾದ ಜೀವನಶೈಲಿ, ಫಾಸ್ಟ್‌ಫುಡ್‌ಗಳ